ಅಧ್ಯಕ್ಷರು: ಅದನ್ನು ತರಿಸಿ ನೋಡುತ್ತೇವೆಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ತರಿಸಿ ನೋಡುತ್ತೇನೆ.

ಈ) ಶಾಸಕರ ಹಕ್ಕು ಬಾಧ್ಯತೆ ಕುರಿತು.

ವಿಷಯ: ನ್ಯಾಯಾಂಗ ಇಲಾಖೆಯ ಕಾರ್ಯಕ್ರಮಗಳಿಗೆ ಶಾಸಕರುಗಳನ್ನು ಆಹ್ವಾನಿಸದೇ ಇರುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ನಿನ್ನೆ ಸದನದಲ್ಲಿ ಶಾಸಕರ ಹಕ್ಕುಬಾಧ್ಯತೆಗಳ ಬಗ್ಗೆ ಮತ್ತು ನ್ಯಾಯಾಂಗ ಇಲಾಖೆಯ ಕಾರ್ಯಕ್ರಮಗಳಿಗೆ ಶಾಸಕರನ್ನು ಕರೆಯದಿರುವ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಈ ಸದನದ ಸದಸ್ಯರ ಭಾವನೆಗಳಿಗೆ ಸ್ಪಂದಿಸಿ, ತಾವು ದೊಡ್ಡ ಮನಸ್ಸು ಮಾಡಿ, ತಾವು, ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿದ್ದಿರಿ. ಅಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಚರ್ಚೆಗಳಾಗಿರಬಹುದು ಅದರ ಬಗ್ಗೆ ಏನಾದರೂ ಹೇಳಿಕೆಯನ್ನು ಮಾನ್ಯ ಚಂದ್ರೇಗೌಡರು ಕೊಟ್ಟರೆ ನಿನ್ನೆ ನಡೆದ ಚರ್ಚೆಗೊಂದು ಪರಿಹಾರ ಸಿಗಲು ಸಾಧ್ಯವೆಂಬುದು ನನ್ನ ಭಾವನೆ.

ಅಧ್ಯಕ್ಷರು: ಅವರ ಹೇಳಿಕೆ ನಂತರ, ಯಾವುದೇ ಚರ್ಚೆ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ತಮ್ಮ ಜೊತೆ ನಾನು ಮುಖ್ಯ ನ್ಯಾಯಾಧೀಶರನ್ನು ನಿನ್ನೆ ಭೇಟಿಯಾಗಿದ್ದೇವೆ. ಮುಕ್ತ ಮನಸ್ಸಿನಿಂದ ಚರ್ಚಿಸಿದ್ದೇವೆ. ಮುಖ್ಯ ನ್ಯಾಯಾಧೀಶರು ತಮ್ಮ ಈ ಒಂದು ತೀರ್ಪಿಗೆ ಕಾರಣ ಹೇಳಿದ್ದಾರೆ. ಯಾರ ಮೇಲಿನ ದ್ವೇಷದಿಂದಾಗಲಿ, ಚುನಾಯಿತ ಪ್ರತಿನಿಧಿಗಳಿಗೆ ಅಗೌರವ ತರಲೆಂದಾಗಲಿ ಅಥವಾ ಶಾಸನ ಸಭೆಗೆ ಅಗೌರವ ತರಲಾಗಲಿ ನಾವು ಇದನ್ನು ಮಾಡಿಲ್ಲ. ಇಲ್ಲಿ ರಾಜಕಾರಣಿಗಳಿಗೆ ಅಥವಾ ಚುನಾಯಿತ ಪ್ರತಿನಿಧಿಗಳಿಗೇನು ಮಿತಿ ಹಾಕಿದ್ದೇವೋ ಹಾಗೆಯೇ ನ್ಯಾಯಾಧೀಶರಿಗೂ ಮಿತಿ ಹಾಕಿದ್ದೇವೆ. ಒಂದೊಂದು ಕೋರ್ಟ್ ಓಪನಿಂಗ್‌ನಲ್ಲಿ 6-8 ನ್ಯಾಯಾಧೀಶರು ಬಂದದ್ದುಂಟು. ಅದು ಏಪರೀತ ಆಸಹ್ಯವಿದ್ದುದ್ದರಿಂದ ಎಲ್ಲಾ ಸರಿಯಾಗಿ ನಡೆಯಲಿ ಎಂಬ ದೃಷ್ಟಿ ಇಟ್ಟುಕೊಂಡು ನ್ಯಾಯಾಧೀಶರಿಗೆ ನೀವು ಒಬ್ಬರೇ ಹೋಗಬೇಕೆಂದು ಹೇಳಿದ್ದೇವೆ. ಸಂಬಂಧಪಟ್ಟ ಮಂತ್ರಿಗಳು ಮತ್ತು ಡಿಸ್ಟ್ರಿಕ್ಟ್ ಮಂತ್ರಿಗಳು ಹೋಗಬೇಕೆಂದು ಹೇಳಿದ್ದೇವೆ. ವಿರೋಧಪಕ್ಷದ ನಾಯಕರನ್ನು ಸಹ ಅದರಲ್ಲಿ ಸೇರಿಸಬೇಕಾಗಿತ್ತು, ಅದನ್ನು ಸೇರಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ.

ವಿಶೇಷವಾಗಿ ತೀರ್ಥಹಳ್ಳಿಯಲ್ಲಿ ನಡೆಯುವ ಸಮಾರಂಭಕ್ಕೆ ಮುಂಚೆ, ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ನೀಡಿದ್ದಾರೆ. ನಿನ್ನೆ ಈ ಸಭೆಯಲ್ಲಿ ನಡೆದಿರತಕ್ಕ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಿದ್ದು, ನೀವು ಹೇಳತಕ್ಕಂಥ ಸಮಸ್ಯೆಯನ್ನು ಗಂಭೀರವಾಗಿ ಗಮನಿಸಿ ಇದಕ್ಕೆ ಏನಾದರೊಂದು ಶಾಶ್ವತವಾದ ಸೂಕ್ತ ಪರಿಹಾರ ಒದಗಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ ಎನ್ನುವ ಮಾತನ್ನು ತಮ್ಮ ಎದುರಿಗೆ ಈಗಾಗಲೇ ಹೇಳಿದ್ದಾರೆ. ಹೀಗಾಗಿ ಇದನ್ನು ಲಂಬಿಸುವುದು ಸರಿ ಎಂದು ನನಗೆ ಕಾಣಿಸುವುದಿಲ್ಲ, ಹಿಂದೆ ನಡೆದಿರತಕ್ಕ ಪ್ರಕರಣಗಳನ್ನು ನಾವು ಅವರ ಗಮನಕ್ಕೆ ತಂದೆವು.

MR.SPEAKER: The Chief Justice has promised that he is going to reconsider. ಎಂದು ಹೇಳಿದ ಮೇಲೆ ಪುನಃ ಇದರ ಬಗ್ಗೆ ಫರ್‌ದರ್ ವ್ಯಾಖ್ಯಾನ ಮಾಡುವುದು ಏನಿದೆ? ಅವರು ರೀಕನ್ಸಿಡಿರೇಷನ್ ಮಾಡುತ್ತೇವೆಂದು ಒಪ್ಪಿಕೊಂಡ ಮೇಲೆ ಇನ್ನೇನು ಇದೆ?

ಶ್ರೀ ಬಿ.ಸೋಮಶೇಖರ್: ತಾವು ಹಾಗೂ ಮಾನ್ಯ ಕಾನೂನು ಸಚಿವರು ಬಹಳ ಆಸಕ್ತಿ ವಹಿಸಿ ನಿನ್ನೆ ಮಾನ್ಯ ಮುಖ್ಯ ನ್ಯಾಯಾಧೀಶರ ಜೊತೆ ಮಾತನಾಡಿ ಇದಕ್ಕೊಂದು ಪರಿಹಾರ ಕಂಡು ಹಿಡಿಯುತ್ತೇವಂದು ಹೇಳುವುದು ಬಹಳ ಸಂತೋಷ. ಸಂವಿಧಾನಾತ್ಮಕವಾಗಿ ಕ್ಷೇತ್ರದ ಶಾಸಕರು ಇರುತ್ತಾರೆ, ಜಿಲ್ಲಾ ಮಂತ್ರಿಗಳೆಂದು ಯಾವುದೇ ಸಂವಿಧಾನದಲ್ಲಿ ಇಲ್ಲ, ಅಂಥವರನ್ನು ಸೇರಿಸಿರುವಾಗ ಶಾಸಕರನ್ನು ಏಕೆ ಸೇರಿಸಬಾರದು?

ಅಧ್ಯಕ್ಷರು: ಅವರು ಪರಿಹಾರ ಕಂಡು ಹಿಡಿಯುತ್ತೇವೆಂದು ಹೇಳಿದ ಮೇಲೆ ಪುನಃ ನೀವು ಏಕೆ ಇದನ್ನು ಹೇಳುತ್ತೀರೋ ನನಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ವಂದನೆ ಹೇಳುವುದಕ್ಕಾಗಿಯೇ ನಿಂತಿದ್ದೇನೆ. ಮಾನ್ಯ ಸುಬ್ಬಾರೆಡ್ಡಿಯವರು ನಿನ್ನೆ ತಾನೇ ಆಯ್ಕೆಯಾಗಿ ಬಂದಿದ್ದಾರೆ, ಅವರಿಗೂ ಕೂಡ ವಂದನೆಗಳನ್ನು ಹೇಳುತ್ತಾ, ಕರ್ನಾಟಕ ಬಾರ್ ಅಸೋಸಿಯೇಷನ್‌ನಿನ ರಾಜ್ಯಾಧ್ಯಕ್ಷರು ಹಾಗೂ ಶಾಸಕರು ಆಗಿರುವುದರಿಂದ ಅವರೂ ಕೂಡ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಈ ವಿಷಯ ಚರ್ಚಿಸಬೇಕಾಗುತ್ತದೆ. ಇದರಲ್ಲಿ ಎಲ್ಲಿ ನ್ಯೂನತೆ ಆಗಿದೆ ಅದನ್ನು ಸರಿಪಡಿಸುವಂಥ ಕೆಲಸ ಅವರು ಮಾಡಬೇಕಾಗುತ್ತದೆ.

ಅಧ್ಯಕ್ಷರು: ಅವರು ಈಗಾಗಲೇ ಇದರ ಬಗ್ಗೆ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಅವಹೇಳನಕಾರಿಯಾದಂಥ ಈ ಸುತ್ತೋಲೆಯನ್ನು ಬಹಳ ಬೇಗ ನಮ್ಮ ರಾಜ್ಯ ಹಾಗೂ ಶಾಸಕಾಂಗದ ಹಿತದೃಷ್ಟಿಯಿಂದ ಅದನ್ನು ವಾಪಸ್ ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ನಮ್ಮ ಕಳಕಳಿಯನ್ನು ತಾವು ಹಾಗೂ ಮಾನ್ಯ ಕಾನೂನು ಸಚಿವರು ವಿಶೇಷವಾಗಿ ಪರಿಗಣಿಸಿ, ತಾವಿಬ್ಬರೂ ಮುಖ್ಯ ನ್ಯಾಯಾಧೀಶರ ಮನೆಗೆ ಹೋಗಿ ಇದರ ಬಗ್ಗೆ ಮಾತನಾಡಿದ್ದೀರಿ, ಈ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ತೀರ್ಥಹಳ್ಳಿಯ ಜನತೆ ಹಾಗೂ ಇಡೀ ರಾಜ್ಯದ ಜನತೆಗೆ ಒಳ್ಳೆಯ ಮೆಸೇಜ್ ಹೋಗಬೇಕು. 4ನೇ ತಾರೀಖಿನಲ್ಲಿ ತೀರ್ಥಹಳ್ಳಿಯಲ್ಲಿ ಕಾರ್ಯಕ್ರಮವಿರುವುದರಿಂದ ಬಹುಶಃ ಇವತ್ತು ಅಥವಾ ನಾಳೆಯೊಳಗೆ ಅದನ್ನು ಪರಿಹರಿಸುತ್ತಾರೆಂದು ನಾನು ಭಾವಿಸುತ್ತೇನೆ. ಪರಿಹಾರ ಮಾಡದೇ ಹೋದರೆ ಅದನ್ನು ತೀರ್ಥಹಳ್ಳಿ ಜನ ಸಹಿಸುವುದಿಲ್ಲ ಎನ್ನುವ ಸಂಗತಿಯನ್ನು ತಮ್ಮ ಗಮನಕ್ಕೆ ಮತ್ತೊಮ್ಮೆ ತರುತ್ತಿದ್ದೇನೆ, ತಾವಿಬ್ಬರೂ ಕೂಡ ಇದು ಸುಖಾಂತ್ಯವಾಗುವಂತೆ ನೋಡಿಕೊಳ್ಳುತ್ತೀರೆಂದು ಭಾವಿಸುತ್ತೇನೆ. ತಾವಿಬ್ಬರೂ ಏನು ಪ್ರಯತ್ನ ಮಾಡಿದಿರಿ ಅದಕ್ಕೆ ನನ್ನ ಕಡೆಯಿಂದ ಧನ್ಯವಾದಗಳು.

ಅಧ್ಯಕ್ಷರು: ಆಯಿತು, ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮಾನ್ಯ ಬೆಳ್ಳುಬ್ಬಿಯವರೇ, ತಾವು ಆಲಮಟ್ಟಿ ಜಲ ವಿದ್ಯುತ್ ಬಗ್ಗೆ ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ತಾವು ಈ ಸಮಸ್ಯೆಯನ್ನು ಪರಿಹಾರ ಮಾಡಿದಿರಿ, ಅದಕ್ಕೆ ನನ್ನ ಧನ್ಯವಾದಗಳು. ಆದರೆ, ನಾನು ಮಾನ್ಯ ಗುರುಸ್ವಾಮಿ ಮತ್ತು ಮಾನ್ಯ ಕೃಷ್ಣಮೂರ್ತಿಯವರು ಕೂಡಿಕೊಂಡು ಒಂದು ಸಮಸ್ಯೆಯನ್ನು ಪ್ರಸ್ತಾಪಿಸಿದ್ದಕ್ಕೆ ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ನಮ್ಮನ್ನೆಲ್ಲಾ ಕರೆದು ಒಂದು ಸಭೆ ಮಾಡಿ ಇದಕ್ಕೆ ಪರಿಹಾರ ಕಂಡುಕೊಳ್ಳೋಣ ಎಂದು ಹೇಳಿದ್ದೀರಿ. ಈಗ ನ್ಯಾಯಾಂಗ ಶಾಸಕಾಂಗದ ಬಗ್ಗೆ ಸಮಸ್ಯೆ ಬಗೆಹರಿಯಿತು, ಶಾಸಕಾಂಗ ಮತ್ತು ಅದರ ಒಳಗಡೆಯಿರುವ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ತಾವು ಒಂದು ಸಭೆಯನ್ನು ಕರೆಯಬೇಕಾಗುತ್ತದೆ. ಈ ಸಮಸ್ಯೆ ಉದ್ಭವ ಆಗುತ್ತಿರುವುದರಿಂದ ನಾನು ಇದನ್ನು ಕೇಳಬೇಕಾಯಿತು.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರವರು ಇದಕ್ಕೆ ಮನಸ್ಸು ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್: ನಿನ್ನೆ ತಾವು ಯಾವ ರೀತಿ ಪ್ರಯತ್ನ ಮಾಡಿದಿರಿ, ಅದೇ ರೀತಿಯಲ್ಲಿ ಇದರ ಬಗ್ಗೆ ಕೂಡ ಪ್ರಯತ್ನಿಸಬೇಕಾಗುತ್ತದೆ. ಏಕೆಂದರೆ, ಹಿಂದೆ ಶಾಸಕರ ಹಕ್ಕುಬಾಧ್ಯತೆಗಳ ಬಗ್ಗೆ ಕೆಲವೊಂದು ವಿಷಯಗಳು ಈ ಸದನದಲ್ಲಿ ಪ್ರಸ್ತಾಪವಾಗಿದೆ. ತಾವು ಈ ವಿಷಯದ ಬಗ್ಗೆ ಆಸಕ್ತಿ ವಹಿಸಿದರೆ ಬಹುಶಃ ಆ ಸಮಸ್ಯೆ ಕೂಡ ಬಗೆ

ಹರಿಯುತ್ತದೆ. ಹಿಂದೆ ತಾವು ಈ ವಿಷಯವಾಗಿ ಹೇಳಿದ್ದೀರಿ.

ಅಧ್ಯಕ್ಷರು: ಮೊದಲು ನಾನು ಮತ್ತು ಮಾನ್ಯ ಕಾನೂನು ಸಚಿವರು ಮಾತನಾಡಿಕೊಂಡು ನಂತರ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುತ್ತೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಪ್ರತಿ ದಿವಸ ಈ ಸಮಸ್ಯೆ ಉದ್ಭವಿಸುತ್ತದೆ, ಏಕೆಂದರೆ, ನಮ್ಮಲ್ಲಿ ಘರ್ಷಣೆಯಾಗಬಾರದು, ಆದ್ದರಿಂದ ತಾವಿಬ್ಬರೂ ಸೇರಿ ನಮ್ಮನ್ನು ಸೇರಿಸಿಕೊಂಡು ಮಾತನಾಡಿ ಪರಿಹಾರ ಕಂಡು ಹಿಡಿದರೆ ಪುನಃ ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯಿರುವುದಿಲ್ಲ.

ಅಧ್ಯಕ್ಷರು: ಕೆಲವು ಎಂಎಲ್ಎಗಳಿಗೆ ಆಯಾಯ ತಾಲ್ಲೂಕುಗಳಲ್ಲಿ ಇನ್ನೂ ತಾರತಮ್ಯ ತೋರಿಸುತ್ತಿದ್ದಾರೆಂದು ಮಾನ್ಯ ಜಯಪ್ರಕಾಶ್ ಹೆಗಡೆಯವರು, ಗುರುಸ್ವಾಮಿಯವರು, ಕೃಷ್ಣಮೂರ್ತಿಯವರು ಹೇಳಿದ್ದಾರೆ. ಅದರ ಬಗ್ಗೆ ನಾವಿಬ್ಬರೂ ಮೊದಲು ಹತ್ತು ನಿಮಿಷ ಮಾತನಾಡಿ ನಂತರ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡೋಣ. ನಾವು ಮಾತನಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ. We will talk. We will take up that issue. ಮಾನ್ಯ ಬೆಳ್ಳುಬ್ಬಿಯವರು ತಾವು ಮಾತನಾಡಿ.

ಊ) ಆಲಮಟ್ಟಿ ಜಲ ವಿದ್ಯುತ್ ಯೋಜನೆ ಕುರಿತು.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ(ಬಸವನಬಾಗೇವಾಡಿ): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಪ್ರಮುಖವಾದ ಆಲಮಟ್ಟಿ ಜಲ ವಿದ್ಯುತ್ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರನ್ನು ಕೇಳಬಯಸುತ್ತೇನೆ. ಆಲಮಟ್ಟಿ ಜಲ ವಿದ್ಯುತ್ ಯೋಜನೆಯ ಕಾಮಗಾರಿಯನ್ನು ಯಾವ ಏಜೆನ್ಸಿಗೆ ಕೊಟ್ಟಿದ್ದೀರಿ? ಇದರಿಂದ ಉತ್ಪಾದನೆಯಾಗುವ ವಿದ್ಯುತ್ತಿನ ಪ್ರಮಾಣವೆಷ್ಟು? ಆ ಯೋಜನೆ ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ ಹೆಚ್.ಕೆ.ಪಾಟೀಲ್(ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲ ವಿದ್ಯುತ್ ಯೋಜನೆ ನಮ್ಮ ರಾಜ್ಯದ ಪ್ರತಿಷ್ಠಿತ ಹಾಗೂ ದೊಡ್ಡ ಯೋಜನೆಯಾಗಿದ್ದು, ಈಗಾಗಲೇ ಜನವರಿ 2ರಂದು ಕೈಗೊಂಡ ನಿರ್ಧಾರದಂತೆ ಸರ್ಕಾರ ಆಲಮಟ್ಟಿ ವಿದ್ಯುತ್ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮಕ್ಕೆ ವಹಿಸಿ ಕೊಡುತ್ತಿದ್ದೇವೆ. ಈ ಯೋಜನೆಯಿಂದ ಒಟ್ಟು 570 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಅಂದಾಜು ಮಾಡಲಾಗಿದೆ. ಅಂದರೆ 297 ಮೆಗಾವ್ಯಾಟ್ ಪವರ್ ಉತ್ಪಾದನೆಯಾಗುತ್ತದೆ. ಕರ್ನಾಟಕ ವಿದ್ಯುತ್ ನಿಗಮದವರು ತಯಾರಿಸಿದ